ಶ್ರೀ ಎಸ್. ಪುಟ್ಟಸ್ವಾಮಿ.—ಹರದನಹಳ್ಳಿ ಆರ್ಯರ್ವಾಡಿ ಓ.ಡಿ.ಆರ್. ದರ್ಜೆಯ ರಸ್ತೆ ಮತ್ತು ಎನ್ನಪುರ—ಹರವೆ ಹೆಗ್ಗೆವಾಡಿ ಎಂ. ಡಿ. ಆರ್. ದರ್ಜೆಯ ರಸ್ತೆಗಳಿಗೆ ವಾರ್ಷಿಕ ದುರಸ್ತಿಗಾಗಿ ಸರ್ಕಾರದವರು ಒಂದು ಮೈಲಿಗೆ ಎಷ್ಟು ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದೆ ಮತ್ತು ಆ ರೀತಿ ವಾರ್ಷಿಕ ದುರಸ್ತಿಗಾಗಿ ಒಂದು ಇಷ್ಟು ಹಣವನ್ನು ಖರ್ಚು ಮಾಡ ಬೇಕೆಂದು ಗೊತ್ತು ಮಾಡಿದ್ದ ಹಣವನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಆ ಎರಡು ರಸ್ತೆಗಳಿಗೂ ಈಗಾಗಲೇ ಸಾಕಷ್ಟು ಹಣವನ್ನು ಖರ್ಚು ಮಾಡಿದೆ. ಮೊದಲನೇ ರಸ್ತೆಗೆ 2 ಲಕ್ಷ 64 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೆ. ಎರಡನೇ ರಸ್ತೆಗೆ 2 ಲಕ್ಷ 81 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದೆ. ಈಗ ಆ ರಸ್ತೆಗಳಿಗೆ ವಾರ್ಷಿಕ ಮೈಂಟೆನೆನ್ಸ್‌ಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೋ ಅದಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿದೆ. ಕಡಿಮೆ ಹಣವನ್ನು ಅವುಗಳಿಗೆ ಖರ್ಚು ಮಾಡಿಲ್ಲ.

1-30 P.M.

ಶ್ರೀ ಎಸ್. ಪುಟ್ಟಸ್ವಾಮಿ.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದ ಪರಿಶಿಷ್ಟದಲ್ಲಿ ರಸ್ತೆಗಳಿಗೆ ಖರ್ಚು ಮಾಡಿರತಕ್ಕ ಹಣದ ಪಟ್ಟಿಯನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ನಿಗದಿಯಾದ ಉತ್ತರವನ್ನು ಕೊಟ್ಟಿಲ್ಲ. ಅದರಲ್ಲಿ ಒಂದು ಮೈಲ ರಸ್ತೆಗೆ ವಾರ್ಷಿಕ ದುರಸ್ತಿಗಾಗಿ ಎಷ್ಟು ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ, ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವುದನ್ನು ಕೊಟ್ಟಿಲ್ಲ. ಆದ್ದರಿಂದ ವಾರ್ಷಿಕ ರಸ್ತೆ ದುರಸ್ತಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ನಿಗದಿಯಾಗಿದೆಯೋ ಅಷ್ಟು ಹಣವನ್ನು ಖರ್ಚು ಮಾಡಿಲ್ಲ. ಅದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಎರ್ಲಾ ರಸ್ತೆಗಳಿಗೂ ವಾರ್ಷಿಕ ಮೈಂಟೆನೆನ್ಸ್‌ಗೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿರುತ್ತದೆಯೋ ಅದರ ಪ್ರಕಾರ ಅನೇಕ ಸಂದರ್ಭಗಳಲ್ಲಿ ಖರ್ಚು ಮಾಡುವುದಿಲ್ಲ. ಸ್ಪೆಷರ್ ಗ್ರಾಂಟ್ ಕೊಟ್ಟು ಜಾಸ್ತಿ ಖರ್ಚು ಮಾಡತಕ್ಕ ಸಂಭವವೂ ಉಂಟು. ಕೆಲವು ಸಂದರ್ಭದಲ್ಲಿ ಕಡಿಮೆ ಖರ್ಚು ಮಾಡುವ ಸಂಭವವೂ ಉಂಟು. ಅಯಾಜಿಲ್ಲೆಗೆ ಕೊಟ್ಟಿರತಕ್ಕ ಒಟ್ಟು ಹಣದಲ್ಲಿ ಯಾವ ಯಾವ ರಸ್ತೆಗೆ ಪ್ರಾಧಾನ್ಯತೆ ಕೊಟ್ಟು ಕೆಲಸಮಾಡಬೇಕು ಎಂಬ ಬಗ್ಗೆ ಅಲ್ಲಿರತಕ್ಕ ಸೂಪರಿಂಟೆಂಡೆಂಟ್ ಇಂಜಿನಿಯರು ಗೊತ್ತು ಮಾಡುತ್ತಾರೆ. ಆ ಪ್ರಕಾರ ಹಣವನ್ನು ಖರ್ಚು ಮಾಡರಾಗುತ್ತದೆ. ನಿಗದಿ ಮಾಡಿದ ಹಣ ಎಲ್ಲವನ್ನು ಖರ್ಚು ಮಾಡತಕ್ಕ ಅಭಿಪ್ರಾಯ ಇಲ್ಲ.

ಶ್ರೀ ಎಸ್. ಪುಟ್ಟಸ್ವಾಮಿ.—ಈ ಎರಡು ರಸ್ತೆಗಳಿಗೂ ಕೂಡ 2½ ಲಕ್ಷ ರೂಪಾಯಿ ಗಳಿಗಿಂತಲೂ ಹೆಚ್ಚಿಗೆ ಕಳೆದ 10 ವರ್ಷಗಳಿಂದ ಖರ್ಚು ಮಾಡಿವ್ವೇವೆ, ರಸ್ತೆಗಳನ್ನು ದುರಸ್ತು ಮಾಡಿದ್ವೇವೆ ಎಂದು ಹೇಳಿದ್ದೀರಿ ; ಆದರೆ ಈಗ ಆ ರಸ್ತೆಗಳು ಇರುವ ಪರಿಸ್ಥಿತಿಯನ್ನು ನೋಡಿದರೆ ಅದಕ್ಕೆ ಖರ್ಚು ಮಾಡಿರುವ ಹಣದಲ್ಲಿ ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳು ಸೇರಿಕೊಂಡು ಹಣವನ್ನು ದುರುಪಯೋಗ ಮಾಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—ರಸ್ತೆಗಳು ನಾದುರಸ್ತಿನಲ್ಲಿ ಇರಬಹುದು. ಆದರೆ ಅಧಿಕಾರಿಗಳು ಹಣವನ್ನು ದುರುಪಯೋಗ ಮಾಡಿದ್ದಾರೆ ಎನ್ನುವ ಬಗ್ಗೆ ನಿಮ್ಮಿಂದಾಗಲೀ, ಅಥವಾ ಯಾರಿಂದಲೂ ದೂರು ಬಂದಿಲ್ಲ. ಆ ರೀತಿ ದೂರು ಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Fake Educational Institutions

181. **Sri I. SOMASHEKARAPPA** (Hosanagar).—Will the Minister for Education be pleased to state.

(*a*) the number of Fake Education Institutions that have come to the knowledge of Government ;

(*b*) the names of such Fake Educational Institutions and the names of the persons associated with such institutions ;

(*c*) the total amounts received so far by such institutions from the Government;

(*d*) the action taken by Government against such institutions?

Sri N. M. KOTRABASAIAH SOGI (Deputy Minister for Education).—

(*a*) Nil.

(*b*) to (*d*) Does not arise.

ಶ್ರೀ ಐ. ಸೋಮಶೇಖರಪ್ಪ.—ಸ್ವಾಮಿ, ಈಗ ಬೆಂಗಳೂರಿನಲ್ಲಿ ಅನೇಕ ಶಿಶುವಿಹಾರಗಳು ಕಾರ್ ಷೆಡ್ ಮತ್ತು ರಾರಿಪೆಡ್‌ಗಳಲ್ಲಿ ನಡೆಯುತ್ತಿವೆ. ಒಂದು ಶಾಲೆಯನ್ನು ನಡೆಸಬೇಕಾದರೆ 20—15 ಅಡಿ ಅಳತೆ ಇರಬೇಕು, ಟ್ರೇನ್ಡ್ ಟೀಚರ್ಸ್ ಇರಬೇಕು, ಎಕ್ವಿಪ್‌ಮೆಂಟ್ ಇರಬೇಕು, ಎಂಬುದಾಗಿ ಸರ್ಕಾರದ ಸ್ಪೆಸಿಫಿಕೇಷನ್ ಇದೆ. ಆದರೆ ಕೆಲವರು ನಮ್ಮನೆ ಒಂದು ಬೋರ್ಡ್ ಹಾಕಿಕೊಂಡು ಶಿಶುವಿಹಾರವನ್ನು ನಡೆಸುತ್ತೇವೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಮಕ್ಕಳು ಓದುತ್ತಾ ಇಲ್ಲ. ಇವೆಲ್ಲವೂ ಫೇಕ್ ಇನ್‌ಸ್ಟಿಟ್ಯೂಷನ್ ಅಲ್ಲವೇ? ಈ ರೀತಿ ಫೇಕ್ ಇನ್‌ಸ್ಟಿಟ್ಯೂಷನ್‌ಗಳು ಇವೆಯೆಂದು ನಾವು ಪತ್ರಿಕೆಯಲ್ಲಿಕೂಡ ಓದಿವ್ದೇವೆ. ಮೈಸೂರು ಜಿಲ್ಲೆಯಲ್ಲಿ ಕೂಡ ಇಂಥಾ ಫೇಕ್ ಇನ್‌ಸ್ಟಿಟ್ಯೂಷನ್‌ಗಳು ಇವೆ. ಅವುಗಳಿಗೆ ಮಂಜೂರಾತಿ ದೊರೆತಿದೆ. ಆ ಇನ್‌ಸ್ಟಿಟ್ಯೂಷನ್‌ಗಳಿಗೆ ಉಪಾಧ್ಯಾಯರನ್ನು ಪೋಸ್ಟ್ ಮಾಡಿದ್ದಾರೆ. ಆದರೆ ಅಲ್ಲಿ ಮಕ್ಕಳೇ ಇಲ್ಲ; ಶಾಲೆಯೂ ಇಲ್ಲ. ಉಪಾಧ್ಯಾಯರುಗಳು ಮಾತ್ರ ಸಂಬಳವನ್ನು ಪಡೆಯುತ್ತಿದ್ದಾರೆ. ಇವು ಫೇಕ್ ಇನ್‌ಸ್ಟಿಟ್ಯೂಷನ್ ಹೌದೋ, ಅಲ್ಲವೇ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಮಾನ್ಯ ಸದಸ್ಯರು ಹೇಳತಕ್ಕಂಥ ಫೇಕ್ ಇನ್‌ಸ್ಟಿಟ್ಯೂಷನ್ ಎನ್ನುವ ಅರ್ಥ ವಿವರಣೆ ಸರಿಯಾಗಿದೆ ಎಂದು ನನಗೆ ಅನಿಸುವುದಿಲ್ಲ. ನಮ್ಮ ವಿದ್ಯಾ ಇಲಾಖೆಯ ಸಂಸ್ಥೆಗಳಿಗೆ ಸಂಬಂಧಪಟ್ಟಹಾಗೆ ನಾನು ಸ್ವಲ್ಪ ವಿವರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೆಕಗ್ನೈಜ್ಡ್ ಇನ್‌ಸ್ಟಿಟ್ಯೂಷನ್ಸ್, ನಾನ್ ರೆಕಗ್ನೈಜ್ಡ್ ಇನ್‌ಸ್ಟಿಟ್ಯೂಷನ್ ಇವೆ. ರೆಕಗ್ನೈಜ್ಡ್ ಇನ್‌ಸ್ಟಿಟೂಷನ್‌ಗಳು ಕೆಲವು ಗ್ರಾಂಟ್ ಪಡೆಯುತ್ತವೆ. ಕೆಲವು ಗ್ರಾಂಟ್ ಪಡೆಯುವುದಿಲ್ಲ. ಆದ್ದರಿಂದ ಇವುಗಳನ್ನು ಸ್ವಲ್ಪ ಕಂಟ್ರೋರ್ ಮಾಡುವುದು ಕಷ್ಟವಾಗುತ್ತಿದೆ.

Sri M. S. KRISHNAN.—If the hon. Deputy Minister did not know the meaning of the word "fake", he should have asked the concerned member what he meant by it. But the Hon. Minister has given a categorical reply to (a) and stated 'Nil.' because he knows the meaning of the word 'fake.' Having known the meaning, he wants to defend himself. The Hon. Deputy Minister stated that there are recognised institutions getting grant and not getting grant and there are also unrecognised institutions. What does he call those educational institutions which take grant, which are supposed to be recognised and which still do not function properly and exist just to eat away all the money and run institutions in pigsty, cattle-sheds and latrines?

Sri N. M. KOTRABASAIAH SOGI.—If any such instances are brought to the notice of the Government, definitely serious action will be taken against the managements of such institutions.

Construction of a Causeway on Bandarsalu

217. **Sri SUBBA RAO HALSNAD** (Baindur).—

Will the Minister for Public works be pleased to state :—

(*a*) whether on 25th February 1968 an application had been received by Government from the Hakkaladi Village Panchayat,